<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ: 973/2014</u>**

**ಸಾಕ್ಷಿಯನ್ನು ದಿಃ 21.12.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಮುತ್ತುಸ್ವಾಮಿ ನಾಯ್ಡು | ಸಿಡಬ್ಲ್ಯೂ:1 | ಪಿಡಬ್ಲ್ಯೂ:2 |
| ತಂದೆಯ ಹೆಸರು | ಲೇಟ್ ನರಸಿಂಹ ನಾಯ್ಡು | | |
| ವಯಸ್ಸು | 71 ವರ್ಷ | | |
| ಉದ್ಯೋಗ | ನಿವೃತ್ತ ಪೊಲೀಸ್ ಉಪಾಧೀಕ್ಷಕರು | | |
| ವಾಸಸ್ಥಳ | ಕೊಳ್ಳೇಗಾಲ | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಾನು 15.08.2008 ರಿಂದ 11.11.2012 ರವರೆಗೆ ನಾನು ಹುಣಸೂರು ಪೊಲೀಸ್ ಉಪ ವಿಭಾಗದಲ್ಲಿ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08.07.2010 ರಂದು ಮಧ್ಯಾಹ್ನ 3.30 ಗಂಟೆಗೆ ಕಚೇರಿಯಲ್ಲಿದ್ದಾಗ ಬಂದ ಖಚಿತ ಮಾಹಿತಿ ಮೇರಗೆ ಗೋಕುಲ ರಸ್ತೆಯಲ್ಲಿರುವ ರಾಜಧಾನಿ ಡಿಲಕ್ಸ್ ಲಾಡ್ಜ್ ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂತು. ತಕ್ಷಣ ನಾನು ಹುಣಸೂರು ವೃತ್ತ ನಿರೀಕ್ಷಕರಾದ ಚಾಸಾ 16 ಹಾಗೂ ಹುಣಸೂರು ಪಟ್ಟಣ ಠಾಣೆಯ ಪಿ ಎಸ್ ಐ ರವರಾದ ಚಾಸಾ 17 ಹಾಗೂ ಗ್ರಾಮಾಂತರ ಠಾಣೆಯ ಪಿ ಎಸ್ ಐ ಚಾಸಾ 13, ಬಿಳಿಕೆರೆ ಠಾಣೆಯ ಪಿ ಎಸ್ ಐ ರವರಾದ ಚಾಸಾ 14, ಮಹಿಳಾ ಸಹಾಯಕ ಉಪನಿರೀಕ್ಷಕರಾದ ಚಾಸಾ 6, ಮಹಿಳಾ ಪೇದೆ ಚಾಸಾ 9, ಮುಖ್ಯ ಪೇದೆ ಚಾಸಾ 7, ಪೇದೆ ಚಾಸಾ 8, ಪೇದೆ ಚಾಸಾ 11, ಪೇದೆ ಚಾಸಾ 12, ಪೇದೆ ಚಾಸಾ 10, ಪೇದೆ ಚಾಸಾ 5 ರವರೊಂದಿಗೆ ಮತ್ತು ಪಂಚರಾಗಿ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿಯನ್ನು ತಿಳಿಸಿ

ಮೇಲೆ ಹೇಳಿದ ಎಲ್ಲರೊಂದಿಗೆ ಮಾಹಿತಿ ಬಂದ ಸ್ಥಳವಾದ ರಾಜಧಾನಿ ಡಿಲಕ್ಸ್ ಲಾಡ್ಜ್ ಗೆ ಹೋಗಿ ಅದರ 3 ನೇ ಅಂತಸ್ತಿನ 110 ಕೊಠಡಿ ಬಳಿ ಹೋದಾಗ ಇಬ್ಬರು ಆಸಾಮಿಗಳು ಅನುಮಾನಸ್ಪದವಾಗಿ ಓಡಾಡುತ್ತಿರುವುದು ಕಂಡು ಬಂತು. ಅವರ ಪೈಕಿ ಕುಮಾರ ಎಂಬಾತನನ್ನು ಹಿಡಿದು ವಿಚಾರಿಸಲಾಗಿ, ತಾನು ಲಾಡ್ಜ್ ಗೆ ವೇಶ್ಯಾವಾಟಿಕೆ ನಡೆಸಲು ಗ್ರಾಹಕರನ್ನು ಕರೆದುಕೊಂಡು ಬರುತ್ತಿರುವುದಾಗಿ ತಿಳಿಸಿದ. ಓಡಿ ಹೋದ ವ್ಯಕ್ತಿಯ ಬಗ್ಗೆ ಕುಮಾರ ಬಳಿ ವಿಚಾರಿಸಿದಾಗ ಆತ ಸದರಿ ಲಾಡ್ಜ್ ನ ಮ್ಯಾನೇಜರ್ ಪ್ರದೀಪ ಎಂದು ಗೊತ್ತಾಯಿತು. ಸದರಿ ಕೊಠಡಿಯೊಳಗೆ ಹೋಗಿ ನೋಡಿದಾಗ ನಾಗೇಂದ್ರ ಎಂಬ ಪುರುಷ ಹಾಗೂ ಅಶ್ವಿನಿ ಎಂಬ ಮಹಿಳೆ ಇದ್ದರು. ಅವರನ್ನು ವಿಚಾರ ಮಾಡಲಾಗಿ ಲೈಂಗಿಕ ಕ್ರಿಯೆಗೆ ಬಂದಿರುವುದಾಗಿ ತಿಳಿಸಿದರು. ನಂತರ ಸದರಿ ಕೊಠಡಿಯನ್ನು ಶೋಧನೆ ಮಾಡಲಾಗಿ ಎರಡು ಕಾಂಡೋಮ್ ಬಾಕ್ಸ್ ಗಳು ಮತ್ತು ನಾಗೇಂದ್ರ ಬಳಿ ರೂ 4,300/- ಹಾಗೂ ಅಶ್ವಿನಿ ಬಳಿ ರೂ 1,200/- ಹಾಗೂ ಬ್ರೋಕರ್ ಕುಮಾರನ ಬಳಿ ರೂ.6,500/- ನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡೆನು. ಈ ಬಗ್ಗೆ ಸಂಜೆ 4.30 ರಿಂದ 5.30 ರವರೆಗೆ ಮಹಜರು ಕ್ರಮವನ್ನು ಜರುಗಿಸಿದೆನು. ಸದರಿ ಮಹಜರಿನ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ನಿಪಿ 1 ಎಂದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು ಅಮಾನತ್ತುಪಡಿಸಿಕೊಂಡ ಹಣ ಮತ್ತು ಎರಡು ಕಾಂಡೋಮ್ ಬಾಕ್ಸ್ ಗಳನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮುದ್ದೆ ಮಾಲುಗಳನ್ನು ಹಾಜರುಪಡಿಸದೆ ಇರುವ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.